ದಿನಾಂಕಃ 21-09-2017 ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು. -

ಪಾಟೀ ಸವಾಲುಃ ಶ್ರೀ ಎಸ್ ಜಿ ಕೆ ವಕೀಲರಿಂದ ಃ

1. ನಾವು ದಾವಾ ಸ್ವತ್ತಿನ ಮಾಲೀಕರು ಅಂತಾ ಘೋಷಣೆಗೆ ಈ ದಾಖಲೆ ಹಾಕಿದ್ದೇವೆ ಎಂದರೆ ನಿಜ. 1ನೇ ಪ್ರತಿವಾದಿ 2008 ರಲ್ಲಿ ದಾವಾ ಸ್ವತ್ತನ್ನು 2ನೇ ಪ್ರತಿವಾದಿಗೆ ರೂ. 8 ಲಕ್ಷ 35 ಸಾವಿರಕ್ಕೆ ಖರೀದಿಗೆ ಕೊಟ್ಟಿದ್ದಾರೆ ಎಂದರೆ ಸುಳ್ಳು. ನಿಆರ್-1 ರಲ್ಲಿ ಸರ್ವೆ ನಂ. 512 ಮಾತ್ರ ನಮೂದು ಇದೆ ಎಂದರೆ ನಿಜ. ಅದರಲ್ಲಿ ಕಾಣಿಸಿದ ಬೆಲೆ ಸರ್ಕಾರದವರು ನಿಗದಿಪಡಿಸಿದ ಬೆಲೆ ಮತ್ತು ಅದು ಮಾರುಕಟ್ಟೆ

ಬೆಲೆ ಅಲ್ಲ ಎಂದರೆ ಸಾಕ್ಷೀ ಸುಮ್ಮನಿರುತ್ತಾರೆ. ನಾವು ದಾವಾ ಸ್ವತ್ತಿನ ಮೇಲೆ ಸರಿಯಾದ ಕೋರ್ಟಫೀಯನ್ನು ತುಂಬಿಲ್ಲ ಎಂದರೆ ಸಾಕ್ಷೀ ಸುಮ್ಮನಿರುತ್ತಾರೆ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಜಮೀನು ಮತ್ತು ಕಟ್ಟಡದ ಬೆಲೆಯನ್ನು ನಮ್ಮ ಅತ್ತೆ ನೊಂದಣಿ ಮಾಡಿಕೊಟ್ಟ ದಿನಾಂಕದ ಮೌಲ್ಯವನ್ನು ಆಧರಿಸಿ ಬರೆಸಿದ್ದೇನೆ. ನಾವು ದಾವೆ ಹಾಕಿದ ದಿನ, ದಾವಾ ಸ್ವತ್ತಿನ ಬೆಲೆ ರೂ. 37 ಲಕ್ಷ 50 ಸಾವಿರ ಆಗುತ್ತದೆ ಎಂದರೆ ಸುಳ್ಳು. ಸುಳ್ಳು ಸಾಕ್ಷೀ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಹಿ.ಸಿ.ಜೆ. ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.